12/03/2018

ಕರ್ನಾಟಕ ಸರ್ಕಾರ
Government of karnataka

ಡಿಎಸ್‌ಇಆರ್‌ಟಿ
DSERT

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
**DEPARTMENT OF STATE EDUCATIONAL RESEARCH AND TRAINING**
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

Phone - 080 26980100
Fax - 080 26422377

ಸಂಖ್ಯೆ :ಒಬಿ1 (ಒಬಿ5) A.C ಖ.06/2017-18 ದಿನಾಂಕ:08-03-2017

## ಪ್ರಕಟಣೆ

**ವಿಷಯ :** ಡಿ.ಎಸ್.ಇ.ಆರ್.ಟಿ ನಿರ್ದೇಶನಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-85 ಇಲ್ಲಿಗೆ ಎರಡು ಏರ್ ಕಂಡಿಷನರ್‌ಗಳನ್ನು ಬೈ-ಬ್ಯಾಕ್ ಅಡಿಯಲ್ಲಿ ಖರೀದಿಸುವ ಬಗ್ಗೆ.

=000=

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಿ.ಎಸ್.ಇ.ಆರ್.ಟಿ. ನಿರ್ದೇಶನಾಲಯ, ಸಾ.ಶಿ.ಇಲಾಖೆ, #4, 100ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-560085. ಈ ಕಛೇರಿಯಲ್ಲಿ ಎರಡು ಏರ್ ಕಂಡಿಷನ್‌ಗಳು ದುರಸ್ತಿಯಲ್ಲಿ ಇದ್ದು ಇವರುಗಳನ್ನು ಬೈ-ಬ್ಯಾಕ್ ಅಡಿಯಲ್ಲಿ ಖರೀದಿ ಮಾಡಬೇಕಾಗಿರುತ್ತದೆ. ಆದ್ದರಿಂದ ಆಸಕ್ತ ಸಂಸ್ಥೆಯವರು ಈ ಕಛೇರಿಗೆ ಬಂದು ಪರಿಶೀಲಿಸಿ, ಎರಡು ಏರ್ ಕಂಡಿಷನ್‌ಗಳನ್ನು (A/C) ಖರೀದಿಸಲು ದರಪಟ್ಟಿಯನ್ನು ನೀಡುವುದು. ಬಂದಿರುವ ದರಪಟ್ಟಿಗಳಲ್ಲಿ ಕಡಿಮೆ ದರ ಸೂಚಿಸುವ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಲಾಗುವುದು. ಸೂಚನಾ ಫಲಕದಲ್ಲಿ ಪ್ರಕಟವಾದ 7 ದಿವಸಗಳೊಳಗಾಗಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ನಿರ್ದೇಶನಾಲಯ, ಹೊಸಕೆರೆಹಳ್ಳಿ ಬೆಂಗಳೂರು-85 ಕಛೇರಿಗೆ ಮೊಹರು ಹಾಗೂ ಸೀಲ್ ಮಾಡಿದ ಲಕೋಟೆಯ ಮೇಲೆ **ಏರ್ ಕಂಡಿಷನರ್ ದರಪಟ್ಟಿ** ಬಗ್ಗೆ ಎಂದು ಬರೆದು ಸಲ್ಲಿಸಲು ತಿಳಿಸಲಾಗಿದೆ.

**ಷರತ್ತುಗಳು:-**

1) ಏರ್ ಕಡಿಷನರ್ ದರಪಟ್ಟಿ ನೀಡುವ ಮೊದಲು ಈ ಕಛೇರಿಗೆ ಬಂದು ಪರಿಶೀಲಿಸಿ ಕೊಠಡಿಯ ಅಳತೆಯ ಮೇಲೆ ಎಷ್ಟು ಟನ್ ಸಾಮರ್ಥ್ಯದ A/C ಅಳವಡಿಸಬೇಕು ಎಂದು ತಿಳಿಸುವುದು.
2) ಸದರಿ ಏರ್‌ಕಂಡಿಷನರ್‌ಗೆ ವಾರಂಟಿ ಅವಧಿಯನ್ನು ನೀಡುವುದು.
3) 5 ಸ್ಟಾರ್ Split A/C ಆಗಿರಬೇಕು.
4) ಬೈ-ಬ್ಯಾಕ್ ಅಡಿಯಲ್ಲಿ ಖರೀದಿಸುವುದರಿಂದ ಹಳೆಯ A/C ಗೆ ನಿಗಧಿಪಡಿಸಿರುವ ದರವನ್ನು ಬಿಲ್ಲಿನಲ್ಲಿ ಕಳೆದು ಬಿಲ್ಲನ್ನು ನೀಡುವುದು.
5) ಆಟೋ ರಿಸ್ಟಾಟ್ ಮತ್ತು ರಿಮೋಟ್ ಕಂಟ್ರೋಲ್ ಹೊಂದಿರಬೇಕು.
6) ಕೊಟೇಶನ್ ಸ್ವೀಕರಿಸಿದ ನಂತರ ಒಪ್ಪುವ ಹಾಗೂ ರದ್ದುಪಡಿಸುವ ಅಧಿಕಾರವನ್ನು ನಿರ್ದೇಶಕರ ಅಧಿಕಾರಕ್ಕೆ ಬಿಡಲಾಗಿದೆ.
7) ದಾಸ್ತಾನುಗಳನ್ನು ಸರಬರಾಜು ಮಾಡಿದ ನಂತರ ಹಣವನ್ನು ಡಿ.ಸಿ.ಬಿಲ್ ಮುಖಾಂತರ ಖಜಾನೆಯಿಂದ ಸೆಳೆದು ಪಾವತಿಸಲಾಗುವುದು.
8) ದಾಸ್ತಾನು ಸರಬರಾಜು ಮಾಡಿದ ನಂತರ ಜೋಡಣಾ ಕಾರ್ಯ ಸರಬರಾಜು ಮಾಡಿದ ಸಂಸ್ಥೆಯವರದ್ದೇ ಆಗಿರುತ್ತದೆ.
9) ದರಪಟ್ಟಿಯಲ್ಲಿ ನಮೂದಿಸಿರುವ ದರಗಳಲ್ಲಿ ವ್ಯತ್ಯಾಸ ಕಂಡುಬರಬಾರದು
10) ಕಾರ್ಯಾದೇಶ ಪಡೆದ ಸಂಸ್ಥೆಯು ಕಾರ್ಯಾದೇಶ ನೀಡಿದ ಒಂದು ವಾರದೊಳಗೆ ದಾಸ್ತಾನು ಸರಬರಾಜು ಮಾಡಿ ಜೋಡಣಾ ಕಾರ್ಯ ಪೂರ್ಣಗೊಳಿಸುವುದು.

ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ
ಮತ್ತು ತರಬೇತಿ ಇಲಾಖೆ